# ರಜೆಯ ಮಜಾ

■ ಉಷಾ ದಿನೇಶ್ ಶೇಟ್, ಶಿವಮೊಗ್ಗ
ಕಲೆ: ಸಂತೋಷ್ ಸಸಿಹಿತ್ಲು



ಮಾವಿನ ತೋಪಲಿ ಮೆಲ್ಲನೆ ನುಸುಳಿ
ಕಲ್ಲನು ಎಸೆದರೆ ಏನು ಮಜಾ
ಮಾಲಿಯು ನೋಡದೇ ಬಿಟ್ಟರೆ ನಮ್ಮನು
ಆಗದು ನಮಗೆ ಯಾವ ಸಜಾ

ಸಿಹಿ ಹುಳಿ ಮಾವನು ಹಂಚುತ ತಿನ್ನಲು
ಗೆಳೆಯರ ಗುಂಪು ಇರಬೇಕು
ತಂಟೆಯ ಮಾಡುತ ಕುಂಟುತ ಓಡಲು
ಬೇಸಿಗೆ ರಜೆಯು ಬರಬೇಕು

ಅಜ್ಜಿಯ ಮನೆಯಲಿ ಅಟ್ಟಕೆ ಹತ್ತಿಸಿ
ಕೆಲಸವ ಕೊಟ್ಟರೆ ನೆಪ ಉಂಟು
ಕಟ್ಟೆಯ ಅಂಚಿನ ಕಾಲುವೆಯಲ್ಲಿ
ಈಜಲು ಬಿಟ್ಟರೆ ನಲಿವುಂಟು

ಸೈಕಲ್ ತುಳಿಯುತ ಕಳಚಲು ಚೈನು
ಜೋಡಿಸಿ ಮತ್ತೆ ಓಡುವೆವು
ಊಟದ ಸಮಯ ಹಾಜರಿ ಇರಲು
ಒಪ್ಪಿಗೆ ಪಡೆದು ಹೊರಡುವೆವು

ಹಳ್ಳಿಯ ಮಣ್ಣಲಿ ಲಗೋರಿ ಆಟ
ಕಬ್ಬಡಿ ಕೋಕೋ ಎಲ್ಲಕೂ ಸೈ
ಓದು ಅಭ್ಯಾಸಕೆ ವಿರಾಮವು ಇರಲು
ನೋಡಿಯೇ ಬಿಡುವೆವು ಒಂದು ಕೈ ■

## ಕುಂಚ ಪ್ರಪಂಚ

ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ: editorsu@sudha.co.in**



ವಿರಾಜ್ ಶಿವರಾಜ್ ಬೆಳ್ಳಕ್ಕಿ
3ನೇ ತರಗತಿ, ಜೆಎಸ್‌ಎಸ್ ಸ್ಕೂಲ್, ಧಾರವಾಡ







ಶ್ರಾವ್ಯ
6ನೇ ತರಗತಿ, ವಿಜಯಭಾರತಿ ವಿದ್ಯಾಲಯ, ಗಿರಿನಗರ